708 (641) ಶ್ರೀ ಬೋಪಯ್ಯ ಕೆ.ಜಿ. (ಮಡಿಕೇರಿ) :–

ಕೃಷಿ ಮಾರುಕಟ್ಟೆ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ರಾಜ್ಯದಲ್ಲಿ ಕೃಷಿ ಮಾರಾಟ ಇಲಾಖೆಯಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಯಾವಾಗ ಅಳವಡಿಸಿಕೊಳ್ಳಲಾಯಿತು ?

ಆ) ದ್ವಿತೀಯ ದರ್ಜೆ ಸಹಾಯಕರ ತಾತ್ಕಾಲಿಕ ಸೇವಾ ಜ್ಯೇಷ್ಠತಾ ಪಟ್ಟಿಗೆ ಬಂದಿರುವ ಆಕ್ಷೇಪಣೆಗಳೆಷ್ಟು, ಬಂದಂತಹ ಆಕ್ಷೇಪಣೆಗಳೇನು ?

ಇ) ಈ ಆಕ್ಷೇಪಣೆಗಳ ಬಗ್ಗೆ ಕೈಗೊಂಡಿರುವ ಯಾವ ಕ್ರಮ ಕೈಗೊಂಡಿದೆ ಹಾಗೂ ಅವುಗಳನ್ನು ಈವರೆಗೂ ಇತ್ಯರ್ಥಗೊಳಿಸದಿರುವ ಕಾರಣಗಳೇನು ?

ಈ) ದ್ವಿತೀಯ ದರ್ಜೆ ಸಹಾಯಕರ ಅಂತಿಮ ಸೇವಾ ಜ್ಯೇಷ್ಠತಾಪಟ್ಟಿ ಯಾವಾಗ ಪ್ರಕಟಿಸಲಾಗುವುದು ?

ಉ) ಇಲಾಖೆಯಲ್ಲಿ ಯಾವ ಯಾವ ದರ್ಜೆಯ ಎಷ್ಟು ಹುದ್ದೆಗಳು ಖಾಲಿ ಇವೆ. ಇವುಗಳಲ್ಲಿ ಎಷ್ಟು ಹುದ್ದೆಗಳನ್ನು ಮೇಲಿನ ಬಡ್ತಿ ಮೂಲಕ ಭರ್ತಿ ಮಾಡಲಾಗುವುದು, ಈ ನಿಟ್ಟಿನಲ್ಲಿ ಯಾವಾಗ ಕ್ರಮ ಕೈಗೊಳ್ಳಲಾಗುತ್ತದೆ ?

ಶ್ರೀ ಶರಣಬಸಪ್ಪ ದರ್ಶನಾಪುರ (ಕೃಷಿ ಮಾರುಕಟ್ಟೆ ಸಚಿವರು) :–

ಅ) ಕೃಷಿ ಮಾರಾಟ ಇಲಾಖೆಯಲ್ಲಿ ಪರಿಷ್ಕೃತ ಕರಡು ವೃಂದ ಮತ್ತು ನೇಮಕಾತಿಗಳನ್ನು ದಿನಾಂಕ 06–02–2007 ರಂದು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿ ಆಕ್ಷೇಪಗಳನ್ನು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು 1978ರನ್ವಯ ಸಲ್ಲಿಸಲು ಕಾಲಾವಕಾಶ ನೀಡಲಾಗಿತ್ತು. ಈ ಸಂಬಂಧ ಸ್ವೀಕೃತವಾಗಿರುವ ಆಕ್ಷೇಪಣೆಗಳನ್ನು ಪರಿಶೀಲಿಸಿ ಅಂತಿಮ ನಿಯಮಗಳನ್ನು ಸದ್ಯದಲ್ಲಿಯೇ ಹೊರಡಿಸಲಾಗುವುದು.

ಆ) 6, ವಿವರಗಳನ್ನು ಅನುಬಂಧ–1ರಲ್ಲಿ ನೀಡಿದೆ

ಇ) ಮತ್ತು ಈ) ಆಕ್ಷೇಪಣೆಗಳನ್ನು ಪರಿಶೀಲಿಸಿದ್ದು, ಅಂತಿಮ ಜ್ಯೇಷ್ಠತಾ ಪಟ್ಟಿಯನ್ನು ಪ್ರಕಟಿಸುವ ಹಂತದಲ್ಲಿದೆ.

ಉ) ಖಾಲಿ ಹುದ್ದೆಗಳ ವಿವರಗಳನ್ನು ಅನುಬಂಧ–2ರಲ್ಲಿ ನೀಡಿದೆ. ವೃಂದ ಮತ್ತು ನೇಮಕಾತಿ ನಿಯಮಗಳನ್ನು ಅಂತಿಮಗೊಳಿಸಿದ ಕೂಡಲೇ ನಿಯಮಾನುಸಾರ ಮುಂಬಡ್ತಿಗೆ ಲಭ್ಯವಿರುವ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುವುದು.

ಅನುಬಂಧ–1

ದಿನಾಂಕ 01–1–2003ರಲ್ಲಿದಂತೆ ದ್ವಿತೀಯ ದರ್ಜೆ ಸಹಾಯಕರ ಪದವೃಂದದ ತಾತ್ಕಾಲಿಕ ಸೇವಾ ಜ್ಯೇಷ್ಠತಾ ಪಟ್ಟಿಗೆ ಸ್ವೀಕರಿಸಲಾದ ಆಕ್ಷೇಪಣೆಗಳ ವಿವರ :

ಕ್ರ. ಸಂ.	ಆಕ್ಷೇಪಣೆ ಸಲ್ಲಿಸಿರುವ ನೌಕರರ ಹೆಸರು ಹಾಗೂ ಹುದ್ದೆ	ಆಕ್ಷೇಪಣೆ ವಿವರ
1.	ಎನ್. ಎಸ್. ಕೋಟೂರ, ವರ್ಗೀಕರಣಕಾರರು, ಕೃಉಮಾಸ, ರಾಣೆಬೆನ್ನೂರು	
2.	ವಿ. ನಾಗರಾಜಯ್ಯ, ದ್ವಿತೀಯ ದರ್ಜೆ ಸಹಾಯಕರು, ಸಹಾಯಕ ನಿರ್ದೇಶಕರ ಕಛೇರಿ, ಕೋಲಾರ	
3.	ಎಸ್. ಪಿ. ಹಿರೇಮಠ್, ಮಾರಾಟ ಸಹಾಯಕರು, ಕೈಉಮಾಸ, ಬಳ್ಳಾರಿ	
4.	ಎ. ಎಸ್. ಸ್ವರ್ಣಲತ, ದ್ವಿತೀಯ ದರ್ಜೆ ಸಹಾಯಕರು, ಸಹಾಯಕ ನಿರ್ದೇಶಕರ ಕಛೇರಿ, ಹಾಸನ	
5.	ಎಂ. ದೇವೇಂದ್ರಪ್ಪ, ಲೆಕ್ಕಿಗ ದರ್ಜೆ–3, ಕೈಉಮಾಸ, ಚಿತ್ತಾಪುರ	
6.	ಸಿ. ಕೆ. ಜೋರಾಪೂರ, ದ್ವಿತೀಯ ದರ್ಜೆ ಸಹಾಯಕರು, ಕೈಉಮಾಸ, ಬೆಳಗಾಂ	

ದ್ವಿತೀಯ ದರ್ಜೆ ಸಹಾಯಕರ ಪದವೃಂದದ ಜ್ಯೇಷ್ಠತಾ ಪಟ್ಟಿಯಲ್ಲಿ ಸದರಿಯವರ ಹೆಸರು ಎಸ್. ಕೊಟ್ಟೂರ ಎಂದು ನಮೂದಿಸಿರುವುದನ್ನು ಎನ್.ಎಸ್. ಕೋಟೂರ ಎಂದು ನಮೂದಿಸಲು ಕೋರಿರುತ್ತಾರೆ.

ಈ ಹಿಂದೆ ಪ್ರತ್ಯೇಕ ಸೇವಾ ಜ್ಯೇಷ್ಠತಾ ಪಟ್ಟಿಯಲ್ಲಿ ಅವರ ಜ್ಯೇಷ್ಠತೆ ಕ್ರಮ ಸಂಖ್ಯೆ 180 ರಲ್ಲಿದ್ದು 1996ರಲ್ಲಿ ಎರಡೂ ಸೇವೆಗಳು ವಿಲೀನಗೊಂಡ ನಂತರ ಅವರ ಜ್ಯೇಷ್ಠತೆಯ ಕ್ರಮ ಸಂಖ್ಯೆ 482ರಲ್ಲಿ ಆಗಿರುವುದು ತೃಪ್ತಿಕರವಾಗಿಲ್ಲವೆಂದು ಆಕ್ಷೇಪಿಸಿರುತ್ತಾರೆ.

ದ್ವಿತೀಯ ದರ್ಜೆ ಸಹಾಯಕರ ಪದವೃಂದದ ಜ್ಯೇಷ್ಠತಾ ಪಟ್ಟಿಯಲ್ಲಿ ಸದರಿಯವರ ಹೆಸರು ಎನ್.ಪಿ. ಹಿರೇಮಠ ಎಂದು ನಮೂದಿಸಿರುವುದನ್ನು ಎಸ್.ಪಿ. ಹಿರೇಮಠ ಎಂದು ನಮೂದಿಸಲು ಕೋರಿರುತ್ತಾರೆ.

ದಿನಾಂಕ 31–12–1996ಕ್ಕೆ ಪ್ರಕಟಿಸಿದ್ದ ದ್ವಿತೀಯ ದರ್ಜೆ ಸಹಾಯಕರ ಪದವೃಂದದ ಜ್ಯೇಷ್ಠತಾ ಪಟ್ಟಿಯಲ್ಲಿ ಸದರಿಯವರ ಜ್ಯೇಷ್ಠತೆ ಸಂಖ್ಯೆ 566ರಲ್ಲಿ ಇದ್ದು ದಿನಾಂಕ 1–1–2003 ರಲ್ಲಿದ್ದಂತೆ ಪ್ರಕಟಿಸಿರುವ ದ್ವಿತೀಯ ದರ್ಜೆ ಸಹಾಯಕರ ಜ್ಯೇಷ್ಠತಾ ಪಟ್ಟಿಯಲ್ಲಿ ಅವರ ಹೆಸರು ಕ್ರಮ ಸಂಖ್ಯೆ 570ರಲ್ಲಿ ಪ್ರಕಟಗೊಂಡಿರುವುದಕ್ಕೆ ಆಕ್ಷೇಪಿಸಿ ಕಾರಣಗಳನ್ನು ತಿಳಿಸುವಂತೆ ಕೋರಿರುತ್ತಾರೆ.

ಜನ್ಮ ದಿನಾಂಕ 28–7–1975 ಎಂಬುದರ ಬದಲಾಗಿ 28–7–1973 ಎಂದು ಹಾಗೂ ಸೇವೆಗೆ ಸೇರಿದ ದಿನಾಂಕ 10–3–1997ರ ಬದಲಾಗಿ 17–3–1997 ಎಂದು ಪ್ರಕಟಿಸಲು ಕೋರಿರುತ್ತಾರೆ.

ಸದರಿಯವರು ದಿನಾಂಕ 5–7–1983 ಕ್ಕಿಂತ ಮೊದಲು ಸ್ಥಳೀಯ ಅಭ್ಯರ್ಥಿಯಾಗಿ ಇಲಾಖೆಯಲ್ಲಿ ದ್ವಿತೀಯ ದರ್ಜೆ ಸಹಾಯಕರಾಗಿ ನೇಮಕಗೊಂಡು ನಂತರ ದಿನಾಂಕ 2–7–1986 ರಂದು ಹೊರಡಿಸಲಾದ ಅಧಿಸೂಚನೆಯ ಪ್ರಕಾರ ದಿನಾಂಕ 4–7–1986 ರಿಂದ ದ್ವಿತೀಯ ದರ್ಜೆ ಸಹಾಯಕರಾಗಿ ಮುಂದುವರೆಸಿರುವುದರಿಂದ ದಿನಾಂಕ 4–7–1986ರ ಪ್ರಕಾರ ಜೇಷ್ಠತಾ ಪಟ್ಟಿಯಲ್ಲಿ ನಮೂದಿಸುವಂತೆ ಕೋರಿರುತ್ತಾರೆ.

ಅನುಬಂಧ–2

ಕ್ರ. ಸಂ.	ಪದನಾಮ	ಮಂಜೂರಾಗಿರುವ ಹುದ್ದೆಗಳು	ಭರ್ತಿಯಾಗಿರುವ ಹುದ್ದೆಗಳು	ಖಾಲಿ ಇರುವ ಹುದ್ದೆಗಳು
1	ನಿರ್ದೇಶಕರು	01	01	–
2	ಹೆಚ್ಚುವರಿ ನಿರ್ದೇಶಕರು	03	03	–
3	ಜಂಟಿ ನಿರ್ದೇಶಕರ ಪದವೃಂದದ ಹುದ್ದಗಳು	19	18	01
4	ಉಪ ನಿರ್ದೇಶಕರು ಪದವೃಂದದ ಹುದ್ದೆಗಳು	22	12	10
5	ಸಹಾಯಕ ನಿರ್ದೇಶಕರು ಪದವೃಂದದ ಹುದ್ದೆಗಳು	47	32	15
6	ಸಹಾಯಕ ನಿರ್ದೇಶಕರು (ಸಾಂಖ್ಯಿಕ)	1	1	–
7	ಜಿಲ್ಲಾ ಲೆಕ್ಕಪರಿಶೋಧಕರ ಪದವೃಂದದ ಹುದ್ದೆಗಳು	138	106	32
8	ಅಧೀಕ್ಷಕ ಅಭಿಯಂತರರು	01	01	–
9	ಕಾರ್ಯನಿರ್ವಾಹಕ ಅಭಿಯಂತರರು	04	03	01
10	ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು/ತಾಂತ್ರಿಕ ಸಹಾಯಕರು	21	20	01
11	ಸಹಾಯಕ ಅಭಿಯಂತರರು	80	60	20
12	ಕಿರಿಯ ಅಭಿಯಂತರರು/ಅಕೃತಿ ರಚನಾಕಾರರು ಆರ್ಕಿಟೆಕ್ಟ್ ಡ್ರಾಫ್ಟ್ಸ್‌ಮನ್/ಹೆಡ್ ಡ್ರಾಫ್ಟ್ಸ್‌ಮನ್	27	22	05
13	ಅಧೀಕ್ಷಕರು	148	102	46
14	ಸಹಾಯಕ ಸಂಖ್ಯಾಧಿಕಾರಿ	01	–	01
15	ರಸಾಯನ ತಜ್ಞರು	12	01	11
16	ಹಿರಿಯ ಮಾರುಕಟ್ಟೆ ಮೇಲ್ವಿಚಾರಕರು	147	95	52
17	ಶೀಘ್ರಲಿಪಿಗಾರರು	19	06	13
18	ಪ್ರಥಮ ದರ್ಜೆ ಸಹಾಯಕರು	350	110	240
19	ಮಾರುಕಟ್ಟೆ ಮೇಲ್ವಿಚಾರಕರು	290	155	135
20	ಡಾಟಾ ಫೀಡರ್	06	06	--
21	ಮಾರಾಟ ಸಹಾಯಕರ ಪದವೃಂದದ ಹುದ್ದೆಗಳು	656	517	139
22	ದ್ವಿತೀಯ ದರ್ಜೆ ಸಹಾಯಕರು	253	176	77
23	ಬೆರಳಚ್ಚುಗಾರರು	202	117	85
24	ವಾಹನ ಚಾಲಕರು	154	70	84
25	ಮಾರುಕಟ್ಟೆ ಮೇಲ್ವಿಚಾರಕ ದರ್ಜೆ–4	142	37	105
26	ಅಡೆಂಡರ್	41	10	31
27	ಸಿಪಾಯಿ	596	341	255
28	ಎಲೆಕ್ಟ್ರೀಷಿಯನ್ ಗ್ರೇಡ್–1	02	02	–
29	ಟೆಕ್ನಿಷಿಯನ್ ಗ್ರೇಡ್–1	01	01	–
30	ಟೆಕ್ನೀಷಿಯನ್ ಗ್ರೇಡ್–2	02	02	–